



## ಹಕ್ಕಿಯ ಮಣ್ಣಿನ ಗೂಡು

ಹಕ್ಕಿಗಳು ಗೂಡು ಕಟ್ಟಲು ಒಣಹುಲ್ಲು, ಕಡ್ಡಿ, ಪ್ಲಾಸ್ಟಿಕ್ ಚೂರು, ಭತ್ತದ ಹುಲ್ಲು ಇತ್ಯಾದಿ ವಸ್ತುಗಳನ್ನು ಬಳಸುವುದು ಸರ್ವೇಸಾಮಾನ್ಯ. ಆದರೆ ಕುಂಬಾರ ಕೀಟದ ಹಾಗೆ ಕಲಸಿದ ಮಣ್ಣಿನಿಂದ ಗೂಡನ್ನು ನಿರ್ಮಿಸುವುದು ವಿರಳ. ಅದಕ್ಕೆ ಸ್ಪಷ್ಟ ಉದಾಹರಣೆಯಂತಿದೆ ಈ ಚಿತ್ರದಲ್ಲಿ ಕಾಣುತ್ತಿರುವ ಮಣ್ಣಿನ ಹಕ್ಕಿ ಗೂಡು. ಮಾನವ ತನ್ನ ಮನೆಯನ್ನು ಕಟ್ಟಲು ಕಾಲಕ್ಕೆ ತಕ್ಕಂತೆ ತಂತ್ರಗಾರಿಕೆಯನ್ನು ಬದಲಾವಣೆ ಮಾಡಿಕೊಂಡಂತೆ ಪಕ್ಷಿಗಳು ಸಹ ತಮ್ಮ ಗೂಡು ನಿರ್ಮಾಣದಲ್ಲಿ ಹೊಸತನ ಕಂಡುಕೊಂಡಿರುವುದು ಅಚ್ಚರಿ ಮೂಡಿಸಿತು.

—ಮಹೇಶ್ ಎಸ್.ಎಚ್., ಹೆಸರೂರು





## ಕೃಷಿ ಭೂಮಿಗೆ ಬಂತು ಷೋಕೇಸ್ ಬೊಂಬೆ

ಪ್ರತಿದಿನ ಮಂಡ್ಯದಿಂದ ಮೊಳೆಕೊಪ್ಪಲ್ ರಸ್ತೆಯಲ್ಲಿ ವಾಯುವಿಹಾರಕ್ಕೆ ಹೋಗುತ್ತೇನೆ. ಒಮ್ಮೆ ಅದೇ ರಸ್ತೆಯಲ್ಲಿ ಸಿಗುವ ಕವಲು ಹಾದಿಯಲ್ಲಿ ಹೋಗುವಾಗ ಸ್ವಲ್ಪ ದೂರದ ಕೃಷಿ ಭೂಮಿಯಲ್ಲಿ ಒಬ್ಬ ವ್ಯಕ್ತಿ ನಿಂತಿರುವ ದೃಶ್ಯ ಕಣ್ಣಿಗೆ ಬಿತ್ತು. ಸುಮಾರು ಒಂದು ಕಿ.ಮೀ ದೂರ ನಡೆದುಕೊಂಡು ಹೋಗಿ ವಾಪಸ್ಸು ಅದೇ ಮಾರ್ಗದಲ್ಲಿ ಬಂದಾಗ ಆ ಸ್ಥಳದಲ್ಲಿ ತಟಸ್ಥವಾಗಿ ನಿಂತಿರುವ ವ್ಯಕ್ತಿಯನ್ನು ನೋಡಿ ಆಶ್ಚರ್ಯಗೊಂಡು ಹತ್ತಿರಕ್ಕೆ ಹೋದೆ. ಅದು ಮನುಷ್ಯಾಕೃತಿಯ ಬೆದರು ಬೊಂಬೆ ಆಗಿತ್ತು.

ಪ್ರಾಣಿ ಪಕ್ಷಿಗಳಿಂದ ಬೆಳೆ ರಕ್ಷಣೆ ಮಾಡುವ ಸಲುವಾಗಿ ಬೆದರು ಬೊಂಬೆಗಳನ್ನು ಜಮೀನುಗಳಲ್ಲಿ ನಿಲ್ಲಿಸುವುದು ಸಾಮಾನ್ಯ. ಅದನ್ನು ಕೃತಕವಾಗಿ ಮರದ ಕೋಲುಗಳ ಹಾಗೂ ಭತ್ತದ ಹುಲ್ಲು ಉಪಯೋಗಿಸಿ, ಹಳೆಯ ಪ್ಯಾಂಟ್ ಶರ್ಟ್‌ಗಳನ್ನು ತೊಡಿಸುತ್ತಾರೆ. ಮಡಿಕೆಯಲ್ಲಿ ಕಣ್ಣು, ಮೂಗು, ಬಾಯಿ ಆಕಾರ ಬಿಡಿಸಿ ಬೆದರು ಬೊಂಬೆ ತಯಾರಿಸುವುದು ವಾಡಿಕೆ.

ಆದರೆ ಇಲ್ಲೊಬ್ಬ ರೈತ ಬಟ್ಟೆ ಅಂಗಡಿಯಲ್ಲಿ ಪ್ರದರ್ಶನಕ್ಕೆ ಇಡುವ ಪ್ಲಾಸ್ಟಿಕ್ ಬೊಂಬೆಯನ್ನೇ ತಂದು, ಅದಕ್ಕೆ ಬಟ್ಟೆ ತೊಡಿಸಿ ಅದನ್ನೇ ಬೆದರು ಬೊಂಬೆಯನ್ನಾಗಿಸಿ ಜಮೀನಿನಲ್ಲಿ ಇಟ್ಟಿದ್ದಾರೆ. ನಾನೇ ದೂರದಿಂದ ನೋಡಿ ಮನುಷ್ಯ ಎಂದು ತಿಳಿದುಕೊಂಡಿದ್ದೆ. ಇನ್ನು ಪ್ರಾಣಿ ಪಕ್ಷಿಗಳು ಕೂಡ ಅದನ್ನು ಮನುಷ್ಯ ಎಂದೇ ಭಾವಿಸಿ ಹತ್ತಿರ ಸುಳಿಯುವುದೂ ಇಲ್ಲ. ತನ್ನ ಬೆಳೆ ರಕ್ಷಣೆಗೆ ಈ ಉಪಾಯ ಕಂಡುಕೊಂಡ ರೈತನಿಗೆ ಭೇಷ್ ಎನ್ನಲೇಬೇಕಲ್ಲವೇ?

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ

**ನೀವೂ ಬರೆಯಿರಿ**

‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗುವ ‘ನಿಮ್ಮ ಪುಟ’ ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ. **ವಿಳಾಸ:** editorsu@sudha.co.in